# ಚಿನ್ನದ ಮೇಳ ಶ್ರುತಿ ರಾಯಭಾರ!



ಹಲವು ವೈವಿಧ್ಯಗಳ ಆಭರಣಗಳನ್ನು ಒಂದೇ ಸೂರಿನಡಿ ಗ್ರಾಹಕರಿಗೆ ಸಿಗುವಂತೆ ಮಾಡುವ ವೇದಿಕೆಯೇ 'ಆಭರಣ ಮೇಳ. ಪ್ರತೀ ವರ್ಷ ರಾಜಧಾನಿ ಬೆಂಗಳೂರಿಗೆ ಸೀಮಿತವಾಗಿದ್ದ ಈ ಒಡವೆ ಮೇಳ ಈ ಸಲ ಹುಬ್ಬಳ್ಳಿಯಲ್ಲಿ ನಡೆಯುತ್ತಿದೆ. ದೇಶದಾದ್ಯಂತ ಇರುವ ಆಭರಣ ವರ್ತಕರು ಮಾರಾಟದಲ್ಲಿ ಪೈಪೋಟಿ ನಡೆಸಲು ಸಜ್ಜಾಗಿದ್ದರೆ ಮಹಿಳೆಯರು ಹೊಸ ಹೊಸ ವಿನ್ಯಾಸಗಳ, ಲೇಟೆಸ್ಟ್ ಟ್ರೆಂಡ್‌ನ ಚಿನ್ನ, ಬೆಳ್ಳಿ, ವಜ್ರದ ಒಡವೆಗಳನ್ನು ಖರೀದಿಸುವ ಸಲುವಾಗಿ ಮೇಳಕ್ಕೆ ಮುಗಿಬೀಳಲು ಕಾತರರಾಗಿದ್ದಾರೆ.

■ **ಉಮಾ ಅನಂತ್**

ಹಬ್ಬ, ಶುಭ ಸಮಾರಂಭಗಳಿಗೂ ಒಡವೆಗೂ ಎಂದೆಂದಿಗೂ ಅವಿನಾಭಾವ ಸಂಬಂಧವಿದೆ. ಈ ಸಂಬಂಧ ಗಟ್ಟಿಗೊಳ್ಳುವುದು ತರಹೇವಾರಿ ಆಭರಣಗಳನ್ನು ಖರೀದಿಸಿ ಉಡುಪಿಗೊಪ್ಪುವ ಒಡವೆಗಳನ್ನು ತೊಟ್ಟಾಗಲೇ. ಕಣ್ಣು ಕೋರೈಸುವ ಚಿನ್ನ, ಬೆಳ್ಳಿ, ವಜ್ರದ ಒಡವೆಗಳ ಜತೆಗೆ ರೇಷ್ಮೆ ಸೀರೆಗೆ ಮ್ಯಾಚಿಂಗ್ ಆಗುವಂಥ ರೂಬಿ, ಎಮರಾಲ್ಡ್, ಹವಳ, ಮುತ್ತುಗಳನ್ನು ಒಳಗೊಂಡ ಒಡವೆಗಳು ಹಬ್ಬದ ಸಂಭ್ರಮವನ್ನೂ ಇಮ್ಮಡಿಗೊಳಿಸುತ್ತದೆ.

ಚಿನ್ನ, ವಜ್ರ, ಬೆಳ್ಳಿಯ ಆಭರಣ ಎಂದರೆ ಯಾವ ಹೆಣ್ಣಿಗೆ ತಾನೇ ಇಷ್ಟವಾಗದು? ಅದೂ ಹಲವು ವಿನ್ಯಾಸಗಳ, ಹೊಸ ಟ್ರೆಂಡ್ ಸೃಷ್ಟಿಸಿರುವ ಒಡವೆಗಳು ಮಹಿಳೆಯರಿಗೆ ಎಂದಿಗೂ ಹಾಟ್ ಫೇವರೆಟ್ ಆಗಿರುತ್ತವೆ.

### ಚಿನ್ನದೊಂದಿಗೆ ತಳುಕು

ಪಾರಂಪರಿಕ ಆಭರಣ ಫ್ಯಾಷನ್ ಆಗಿ ಬಂದ ಲಾಗಾಯ್ತಿನಿಂದಲೂ ಚಿನ್ನದ ಜತೆಗೆ ಅತ್ಯಾಕರ್ಷಕ ಕುಂದನ್, ಮಿನಾಕರಿ, ಟೆಂಪಲ್ ಜ್ಯುವೆಲ್ಲರಿ, ಇಟಾಲಿಯನ್ ಆಭರಣ, ಮುತ್ತು, ರೂಬಿ, ಹರಳು, ಪಚ್ಚೆ, ಹವಳಗಳು ತಳುಕು ಹಾಕಿಕೊಳ್ಳುತ್ತಿವೆ. ಇವುಗಳನ್ನು ಮತ್ತಷ್ಟು ಆಕರ್ಷಕವಾಗಿ ಗ್ರಾಹಕರನ್ನು ತಲುಪಿಸಲು ಆಭರಣ ಮಳಿಗೆಗಳು ಮುಂದಾಗುತ್ತವೆ. ಸಾಂಪ್ರದಾಯಿಕ ಒಡವೆಗಳು, ವಧುವಿನ ಅಲಂಕಾರಿಕ ಆಭರಣದ ಸಂಗ್ರಹ, ನಿಜಾಮರ, ಮೊಘಲರ ಕಾಲದ ಒಡವೆಗಳು, ಹಗುರವಾದ ಆಭರಣ, ಟು–ಇನ್–ವನ್ ಒಡವೆ ಸಂಗ್ರಹ, ವಿಕ್ಟೋರಿಯನ್ ಆಭರಣ.. ಹೀಗೆ ಆಭರಣಗಳ ತರಾವರಿ ಸಂಗ್ರಹ ಫ್ಯಾಷನ್ ಜಗತ್ತಿನಲ್ಲಿ ಇಂದಿಗೂ ರಾಜ್ಯಭಾರ ನಡೆಸುತ್ತಿದೆ.

ಎಥ್ನಿಕ್ ಆಭರಣ, ಆಮ್ರಪಾಲಿ ಒಡವೆ, ಸಿಂಪಲ್ ಆಗಿರುವ ಆ್ಯಂಟಿಕ್ ಒಡವೆಗಳು ಕೂಡ ಮಹಿಳೆಯರಿಗೆ ಆಯ್ಕೆಯನ್ನು ಒದಗಿಸಿ ಮನಗೆಲ್ಲುತ್ತಿವೆ. ಒಡವೆ ವರ್ತಕರಿಗೆ ರಾಜ್ಯದ ನಾನಾ ಭಾಗಗಳಲ್ಲಿ ನೆಲೆಸಿರುವ ಜನರ ಆಭರಣ ಕ್ರೇಜ್‌ನ ಬಗೆಗಿನ